# <u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಮಳವಳ್ಳಿ</u>

## <u>ಸಿ.ಸಿ ನಂ. 209/2018</u>

ಫ್ರಾಸಾ – 4　　　　ಚಾಸಾ – 9

ಸಾಕ್ಷಿಯನ್ನು ದಿಃ 23.06.2026 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು

| | |
|---|---|
| ಸಾಕ್ಷಿದಾರರ ಹೆಸರು | ಚಿಕ್ಕರಾಜು |
| ತಂದೆಯ / ಗಂಡನ ಹೆಸರು | ಚಿಕ್ಕೇಗೌಡ |
| ವಯಸ್ಸು | 30 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ಕರಳಕಟ್ಟೆ ಗ್ರಾಮ |

**<u>ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ ರವರಿಂದ</u>**

1. ಆರೋಪಿ ಗೊತ್ತು. ಚಾಸಾ.8 ಗೊತ್ತು.
2. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿಯಿಲ್ಲ. ನಾನು ಪೋಲೀಸರಿಗೆ ಹೇಳಿಕೆ ನೀಡಿಲ್ಲ. ನ್ಯಾಯಾಲಯದಿಂದ ಸಮನ್ಸ್ ಬಂದಿದ್ದರಿಂದ ಪ್ರಸ್ತುತ ಪ್ರಕರಣಕ್ಕೆ ಹಾಜರಾಗಿರುತ್ತೇನೆ.

> (ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಶ್ರೀ ಸ ಸ ಅ ರವರು ಅನುಮತಿಯನ್ನು ಕೋರುತ್ತಾರೆ. ಕಡತವನ್ನು ಪರೀಕ್ಷಿಸಲಾಗಿ ಸಾಕ್ಷಿಯು ಪ್ರತ್ಯಕ್ಷ ಸಾಕ್ಷಿದಾರನಾಗಿದ್ದು ವಿರುದ್ಧ ಸಾಕ್ಷ್ಯವನ್ನು ನುಡಿಯುತ್ತಿದ್ದಾರೆ ಆದರಿಂದ ಅವರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಯನ್ನು ನೀಡಲಾಯಿತು.)

**<u>ಪಾಟೀ ಸವಾಲು: ಮಾನ್ಯ ಸ.ಸ.ಅ ರವರಿಂದ</u>**

3. ದಿನಾಂಕ 12.06.2017 ರಂದು ಸಂಜೆ 04.15 ರಿಂದ 05.15 ಗಂಟೆಯವರೆಗೆ ಚಾಸಾ.1 ರವರು ಮುತ್ತತ್ತಿಗೆ ಹೋಗುವ ರಸ್ತೆಯಲ್ಲಿರುವ ಫಾರೆಸ್ಟ್ ಚೆಕ್ ಪೋಸ್ಟ್ ಬಳಿ ಆರೋಪಿಯು ಅಕ್ರಮವಾಗಿ ತನ್ನ ದ್ವಿಚಕ್ರವಾಹನದಲ್ಲಿ ಅಕ್ರಮವಾಗಿ ಮದ್ಯ ಸಾಗಾಟ ಮಾಡುತ್ತಿದ್ದರಿಂದ ದಾಳಿ ಮಾಡಿ ಮಹಜರ್ ಕ್ರಮ ಜರುಗಿಸಿ 90 ಎಂ ಎಲ್ ನ 43

ಹೈವಾರ್ಡ್ ಚಿಯರ್ಸ್ ವಿಸ್ಕಿ ಪೌಚುಗಳು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಶಪಡಿಸಿಕೊಂಡ ಮುದ್ದೆ ಮಾಲುಗಳನ್ನು ಈಗ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ.

**4.** ಈ ಕುರಿತು ದಿನಾಂಕ 12.06.2017 ರಂದು "ನಾನು ಈಗ್ಗೆ ಸುಮಾರು ......................................................................................ಮತ್ತೆ ನೋಡಿದರೆ ಗುರ್ತಿಸುತ್ತೇನೆ." ಎಂದು ಈ ಮೇಲೆ ಓದಿ ಹೇಳಿದ ರೀತಿ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ತನ್ನ ಹೇಳೀಕೆಯನ್ನು ಒಪ್ಪದ ಕಾರಣ ನಿ.ಪಿ–6 ಎಂದು ಗುರುತಿಸಲಾಯಿತು.

**5.** ನಾನು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಇಲ್ಲ**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ